**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 805/2021**

| | | | |
|---|---|---|---|
| **ಹೆಸರು** | **:** | **ವಿಜಯ ಮಾಂತೇಶ** | **ಚಾ.ಸಾ.19** |
| **ತಂದೆಯ ಹೆಸರು** | **:** | **ಬಸಯ್ಯ ಮಠಪತಿ** | **ಪ್ರಾ.ಸಾ.6** |
| **ವಯಸ್ಸು** | **:** | **42 ವರ್ಷ** | **ದಿನಾಂಕಃ 08-02-2024** |
| **ಉದ್ಯೋಗ** | **:** | **ಪೋಲಿಸ ನಿರೀಕ್ಷಕರು** | |
| **ವಾಸಸ್ಥಳ** | **:** | **ವಿಜಯಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

25-10-2019 ರಿಂದ ಜನವರಿ 2021 ರವರೆಗೆ ಪೋಲಿಸ ವೃತ್ತ ನಿರೀಕ್ಷಕರಾಗಿ ಸುಲೇಪೇಟನಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ 10-10-2020 ರಂದು ಪ್ರಕರಣದ ಕಡತವನ್ನು ಚಾಸಾ-18 ರವರಿಂದ ಪಡೆದುಕೊಂಡಿದ್ದೇನೆ. ಅದೇ ದಿನ ಚಾಸಾ-9 ಮತ್ತು 10 ರವರ ಸಮಕ್ಷಮ ಮೃತ ನಾಗಪ್ಪರವರ ಶವ ಮಹಜರ ಪಂಚನಾಮೆಯನ್ನು ಮಾಡಿದ್ದೇನೆ. ಸದರಿ ಶವ ಮಹಜರ ಪಂಚನಾಮೆಯನ್ನು ನಿಪಿ-8 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಆ ಸಮಯಕ್ಕೆ ಪಡೆದ ಭಾವಚಿತ್ರಗಳನ್ನು ನಿಪಿ-2 ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ಪ್ರಾಸಾ-3, ಚಾಸಾ-6 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದಿನಾಂಕ 11-10-2020 ರಂದು ಬೆಳಗ್ಗೆ 10 ರಿಂದ 11 ಗಂಟೆಗೆ ವರೆಗೆ ಪ್ರಾಸಾ-2 ರವರು ತೋರಿಸಿದಂತೆ ಚಾಸಾ-11 ಮತ್ತು 12 ರವರ ಸಮಕ್ಷಮ ಗುನ್ನೆ ಸ್ಥಳ ಪಂಚನಾಮೆಯನ್ನು ಮಾಡಿ ಭಾವಚಿತ್ರವನ್ನು ಪಡೆದಿದ್ದೇನೆ. ಈಗ ನೋಡುತ್ತಿರುವ ಪಂಚನಾಮೆ ನಾನೇ ಮಾಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೆ. ಸದರಿ ಪಂಚನಾಮೆಯನ್ನು ನಿಪಿ-9 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಆ ಸಮಯಕ್ಕೆ ಪಡೆದ ಭಾವಚಿತ್ರಗಳನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದೆ. ಅದೇ ದಿನ ಮಧ್ಯಾಹ್ನ 12.30 ಕ್ಕೆ ಚಾಸಾ-13 ಮತ್ತು 14 ರವರ ಸಮಕ್ಷಮ ಸುಲೇಪೇಟ ಪೋಲಸ ಠಾಣೆಯ ಆವರಣದಲ್ಲಿರುವ ಪ್ರಕರಣದಲ್ಲಿ ಬಾಗಿಯಾಗಿರುವ ವಾಹನಗಳ್ನು ಜಪ್ತಿ ಮಾಡಿ ಜಪ್ತಿ ಪಂಚನಾಮೆಯನ್ನು ಬರೆದಿದ್ದೇನೆ. ಜಪ್ತಿ ಪಂಚನಾಮೆಯನ್ನು ನಿಪಿ-10 ಎಂದು

ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಜಪ್ತಿ ಕಾಲಕ್ಕೆ ಪಡೆದ ಭಾವಚಿತ್ರಗಳನ್ನು ಈಗಾಗಲೇ ನಿಪಿ-3 ರಿಂದ 5 ಎಂದು ಗುರುತಿಸಲಾಗಿದೆ. ಅದೇ ದಿನ ಪ್ರಾಸಾ-2, 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

ದಿನಾಂಕ 25-10-2020 ರಂದು ಚಾಸಾ-6, 7, 11, ಪ್ರಾಸಾ-2 ಮತ್ತು ಪ್ರಾಸಾ-1 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದಿನಾಂಕ 26-10-2020 ರಂದು ಚಾಸಾ-9 ರವರ ಹೇಳಿಕೆಯನ್ನು ಪಡೆದು ವಾಹನ ಮಾಲೀಕನಾದ ಚಾಸಾ-9 ರವರಿಗೆ ಕರಾರು ಪತ್ರವನ್ನು ಬರೆಸಿಕೊಂಡು ವಾಹನವನ್ನು ಬಿಡುಗಡೆ ಮಾಡಿದ್ದೇನೆ. ಕರಾರು ಪತ್ರವನ್ನು ನಿಪಿ-11 ಎಂದು ಗುರುತಿಸಲಾಯಿತು. ದಿನಾಂಕ 10-11-2020 ರಂದು ಮೃತ ನಾಗಪ್ಪನ ಶವ ಪರೀಕ್ಷೆ ವರದಿಯನ್ನು ಪಡೆದುಕೊಂಡಿದ್ದೇನೆ. ಶವ ಪರೀಕ್ಕೆ ವರದಿಯನ್ನು ನಿಪಿ-12 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ದಿನಾಂಕ 04-12-2020 ರಂದು ಪ್ರಾಸಾ-3 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-13 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ದಿನಾಂಕ 10-12-2020 ದಿನದಂದು ಅಪಘಾತಕ್ಕೆ ಒಳಗಾಗಿದ ವಾಹನಗಳ ಐ.ಎಮ್.ವಿ ವರದಿಯನ್ನು ಪಡೆದುಕೊಂಡಿದ್ದೇನೆ. ಐ.ಎಮ್.ವಿಯನ್ನು ನಿಪಿ-14 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ದಿನಾಂಕ 10-12-2020 ರಂದು ತನಿಖೆ ಪೂರ್ಣ ಗೊಳಿಸಿ ಆರೋಪಿಯ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ.

ಈಗ ನೋಡುತ್ತಿರುವ ನಿಪಿ-7 ರ ಹೇಳಿಕೆಯನ್ನು ನಾನೇ ಪಡೆದುಕೊಂಡಿದ್ದೇನೆ.

<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎ.ಎಸ್. ವಕೀಲರಿಂದಃ-</u>

ಅಪಘಾತ ಹೋಡೆಭೀರನಳ್ಳಿ-ಕುಪನೂರ ರಸ್ತೆಯಲ್ಲಿ ಆಗಿದೆಯೋ ಅಥವಾ ಗುಲಬರ್ಗಾ-ಚಿಂಚೋಳಿ ರಸ್ತೆಯಲ್ಲಿ ಆಗಿದಯೋ ಪ್ರಶ್ನಿಸಿದಾಗ ಸಾಕ್ಷಿ ಸುಲೇಪೇಟ-ಹೊಡೆಭೀರನಳ್ಳಿ ಹೋಗುವ ರಸ್ತೆಯಲ್ಲಿ ಅಪಘಾತವಾಗಿದೆ ಎಂದು ನುಡಿಯುತ್ತಾರೆ. ಪ್ರಾಸಾ-2 ರವರು ತೋರಿಸಿದಂತೆ ಸ್ಥಳ ಪಂಚನಾಮೆ ಮಾಡಿದ್ದೇನೆ ಎಂದರೆ ಸರಿ. ಅಪಘಾತವಾದ ಸ್ಥಳ ಕಚ್ಚಾ ರಸ್ತೆ ಇದೆ ಎಂದರೆ ಸಾಕ್ಷಿ ಡಾಂಬರ ರಸ್ತೆ ಇಂದೆ ಎಂದು ನುಡಿಯುತ್ತಾರೆ. ಅಪಘಾತ ಎದುರು ಬದುರು ಆಗಿದೆ ಎಂದರೆ ಸರಿ. ಎದುರು ಬದುರು ಅಪಘಾತವಾದ ಕಾರಣ ಎರಡು ವಾಹನ ಚಾಲಕರ ತಪ್ಪು ಇರುತ್ತದೆ ಎಂದರೆ ಸರಿಯಲ್ಲ. ಇನ್ನೊಂದು ವಾಹನದ ಚಾಲಕನ ಹತ್ತಿರ ಚಾಲನ ಪರವಾನಿಗೆ ಇರಲಿಲ್ಲ ಮತ್ತು ವಿಮೆ ಸಹ ಇರಲಿಲ್ಲ ಆದ್ದರಿಂದ ಆರೋಪಿಯ ವಿರುದ್ದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸದ್ದೇನೆ ಎಂದರೆ

ಸರಿಯಲ್ಲ. ಮೃತ ವ್ಯಕ್ತಿಗೆ ಮತ್ತು ಗಾಯಾಳುಗಳಿಗೆ ಪರಿಹಾರ ಹಣ ಕೊಡಿಸಲು ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗದೆ ಠಾಣೆಯಲ್ಲಿ ಕುಳಿತು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**